ಕಾಗದ ಪತ್ರಗಳ ಮಂಡನೆ

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಶ್ರೀ ಎಸ್. ಆರ್. ಬೊಮ್ಮಾಯಿ ಅವರ ಹೆಸರಿನ ಮುಂದಿರುವ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

೧೯೬೪ನೇ ಇಸವಿಯ ಕರ್ನಾಟಕ ಭೂ ಕಂದಾಯ ಶಾಸನದ ೧೯೪(೨)ನೇ ಕಲಮಿನ ಮೇರೆಗೆ–

(ಅ) ೧೯೮೫–೮೬ನೇ ಸಾಲಿನಲ್ಲಿ ಹಾವೇರಿ ತಾಲ್ಲೂಕಿನ ೪೧ ಗ್ರಾಮಗಳಿಗೆ ಭೂ ಕಂದಾಯವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೨೩ನೇ ಜನವರಿ ೧೯೮೬ ರಂದು ಹೊರಡಿಸಲಾದ ಆರ್.ಇ.ವಿ.ಸಿ.ಆರ್. ೧೪೧–೮೫–೮೬ನೇ ಕ್ರಮಾಂಕದ ಅಧಿಸೂಚನೆಯನ್ನು.

(ಆ) ೧೯೮೫–೮೬ನೇ ಸಾಲಿನಲ್ಲಿ ಬ್ಯಾಡಗಿ ತಾಲ್ಲೂಕಿನ ೫೫ ಗ್ರಾಮಗಳಿಗೆ ಭೂ ಕಂದಾಯವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೨೩ನೇ ಜನವರಿ, ೧೯೮೬ ರಂದು ಹೊರಡಿಸಲಾದ ಆರ್.ಇ.ವಿ.ಸಿ.ಆರ್ ೧೪೩ ೮೫–೮೬ನೇ ಕ್ರಮಾಂಕದ ಅಧಿಸೂಚನೆಯನ್ನು. ಹಾಗೂ

(ಇ) ೧೯೮೫–೮೬ನೇ ಸಾಲಿನಲ್ಲಿ ಕುಂದಗೋಳ ತಾಲ್ಲೂಕಿನ ೨೧ ಗ್ರಾಮಗಳಿಗೆ ಭೂ ಕಂದಾಯವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೨೪ನೇ ಜನವರಿ ೧೯೮೬ ರಂದು ಹೊರಡಿಸಲಾದ ಆರ್.ಇ.ವಿ.ಸಿ.ಆರ್ ೧೪೭ ೮೫–೮೬ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್ (ವಿದ್ಯುಚ್ಛಕ್ತಿ, ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ,

(೧) ೧೯೪೮ನೇ ಇಸವಿಯ ವಿದ್ಯುಚ್ಛಕ್ತಿ ಸರಬರಾಜು ಶಾಸನದ ೬೧(೮)ನೇ ಕಲಮಿನ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ೧೯೮೬–೮೭ನೇ ಸಾಲಿನ ೨೯ನೆಯ ವಾರ್ಷಿಕ ಆರ್ಥಿಕಪಟ್ಟಿ ಹಾಗೂ ೧೯೮೫–೮೬ನೇ ಸಾಲಿನ ಪರಿಷ್ಕೃತ ಆರ್ಥಿಕ ಪಟ್ಟಿಯನ್ನು.

(೨) ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯(ಎ) ಕಲಮಿನ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕಾರ್ಯಾಚರಣೆಗೆ ಸಂಬಂಧಿಸಿದಂತೆ ೧೯೪೪–೮೫ನೇ ಸಾಲಿನ ೧೫ನೇ ವಾರ್ಷಿಕ ವರದಿಯನ್ನು ಹಾಗೂ ಲೆಕ್ಕಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಕಾಗದಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು. ಈಗ ಗಮನಸೆಳೆಯುವ ಸೂಚನೆಗಳು. ಶ್ರೀ ಯಡಿಯೂರಪ್ಪನವರ ಗಮನಸೆಳೆಯುವ ಸೂಚನೆಯಂಯನ್ನು ನಂತರ ತೆಗೆದುಕೊಳ್ಳುತ್ತೇನೆ. ಈಗ ಶ್ರೀ ಮಲ್ಲಪ್ಪನವರು ತಮ್ಮ ಗಮನಸೆಳೆಯುವ ಸೂಚನೆಯ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯಬಹುದು.

ಗಮನ ಸೆಳೆಯುವ ಸೂಚನೆ

ವ್ಯವಸಾಯಕ್ಕೆ ಉಪಯೋಗಿಸುವ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಬಗ್ಗೆ.

ಶ್ರೀ ಕೆ. ಮಲ್ಲಪ್ಪ.—ರಾಜ್ಯದಲ್ಲಿ ಒಕ್ಕಲುತನಕ್ಕೆ ಉಪಯೋಗಿಸುವ ಪಂಪುಸೆಟ್ಟುಗಳಿಗೆ ಸರಿಯಾಗಿ ವಿದ್ಯುತ್‌ನ್ನು ಸರಬರಾಜು ಸಮರ್ಪಕವಾಗಿಲ್ಲದೇ ಇರುವುದರಿಂದ ವ್ಯವಸಾಯಕ್ಕೆ ಬಹಳ ತೊಂದರೆಯಾಗಿದೆ. ಮತ್ತು ರಾಜ್ಯದಲ್ಲಿರುವ ರೈತರಿಗೆ ತುಂಬಾ ನಷ್ಟವಾಗಿದೆ. ಮಾನ್ಯ ಮಂತ್ರಿಯವರು ಇದರ ಬಗ್ಗೆ ಗಮನಹರಿಸಿ ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ಅವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುತ್, ಗಣಿ ಮತ್ತು ಭೂವಿಜ್ಞಾನ ಮಂತ್ರಿಯವರು).—ಮಾನ್ಯ ಸಭಾಧ್ಯಕ್ಷರೇ, ಈಗ ರಾಜ್ಯದಲ್ಲಿ ೪,೮೫,೬೭೪ ಪಂಪುಸೆಟ್ಟುಗಳು ಸದ್ಯದಲ್ಲಿ ಇವೆ. ಪಂಪುಸೆಟ್ಟುಗಳಿಗೆ ದಿನದಲ್ಲಿ ೬ ಗಂಟೆಗಳ ಕಾಲ ಮಾತ್ರ ವಿದ್ಯುತ್‌ನ್ನು ನಿಲ್ಲಿಸಲಾಗುತ್ತಿದೆ. ಉಳಿದ ಸಮಯಗಳಲ್ಲಿ ವಿದ್ಯುತ್‌ನ್ನು ಉಪಯೋಗಿಸಲು ಗ್ರಾಹಕರಿಗೆ ಯಾವ ನಿರ್ಬಂಧ ಅಥವಾ ಕಡಿತ ಇಲ್ಲ. ಯಾವುದಾದರೂ ಕಡೆ ಅತೃಪ್ತಿಕರವಾಗಿ ವಿದ್ಯುತ್ ಸರಬರಾಜು ಆಗುತ್ತಿದ್ದಲ್ಲಿ ಅದನ್ನು ತಿಳಿಸಿದರೆ ಮಂಡಳಿಯು ಅದನ್ನು ಸರಿಪಡಿಸುತ್ತದೆ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ವಿದ್ಯುತ್ ಕೊರತೆ ನೀಗಿಸುವುದಕ್ಕೋಸ್ಕರ ನಗರ ಪ್ರದೇಶಗಳಲ್ಲಿ, ಪ್ರತಿ ದಿನ ರಾತ್ರಿ ಹೊತ್ತು ಬೀದಿ ದೀಪಗಳನ್ನು ವಿದ್ಯುಚ್ಛಕ್ತಿ ಇಲಾಖೆಯವರು ಉರಿಸುತ್ತಾರೆ. ಹುಣ್ಣಿಮೆಯ ದಿನಗಳಲ್ಲಿ ಚಂದ್ರನ ಬೆಳಕು ಸಾಕಷ್ಟು ಇರುತ್ತದೆ. ಅಂತಹ ಸಮಯದಲ್ಲಿ ಬೀದಿ ದೀಪಗಳನ್ನು ತರಿಸಿದರೆ ಬಹಳ ವಿದ್ಯುಚ್ಛಕ್ತಿ ಉಳಿತಾಯವಾಗುತ್ತದೆ. ಈ ರೀತಿ ಉಳಿತಾಯವಾದ ವಿದ್ಯುಚ್ಛಕ್ತಿಯನ್ನು ವ್ಯವಸಾಯಗಾರರು ಉಪಯೋಗಿಸುವ ಪಂಪುಸೆಟ್ಟುಗಳಿಗೆ ಕೊಡಬಹುದು. ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಬೇಕು.

ಶ್ರೀ ಜೆ. ಎಸ್. ದೇಶ್‌ಮುಖ್.—ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಂಡು ಅದರ ಬಗ್ಗೆ ವಿಚಾರ ಮಾಡುತ್ತೇನೆ.

ಅಧ್ಯಕ್ಷರು.—ಈ ಮುಂದಿನ ವಿಷಯ ವಿತ್ತೀಯ ಕಲಾಪಗಳು, ಅದರ ಮೊದಲು ೩೫ಳಿರ ವಿಷಯ ಇದೆ, ತೆಗೆದುಕೊಳ್ಳೋಣ.

ನಿಯಮ ೩೫ಳಿರ ಮೇಲಿನ ಚರ್ಚೆ

(i) ಬಾಗೇಪಲ್ಲಿಯ ಪರಗೋಡು ಗ್ರಾಮದ ಹತ್ತಿರ ಮಿನಿ ಬಾಟ್ಲಿಂಗ್ ಸಾರಾಯಿ ಕಂಪನಿಯ ಬಗ್ಗೆ.

ಶ್ರೀ ಬಿ. ನಾರಾಯಣಸ್ವಾಮಿ.—ಮಾನ್ಯ ಅಧ್ಯಕ್ಷರೇ, ಬಾಗೇಪಲ್ಲಿ ಪರಗೋಡು ಗ್ರಾಮದ ಹತ್ತಿರ ಚಿತ್ರಾವತಿ ನದಿ ದಡದಲ್ಲಿ ಮಿನಿ ಬಾಟ್ಲಿಂಗ್ ತಯಾರು ಮಾಡುವ ಕಂಪನಿಯನ್ನು ಬಾಗೇಪಲ್ಲಿಯಲ್ಲಿಯ ಪೋಲೀಸರು ಧಾಳಿ ಮಾಡಿ ಸಾರಾಯಿ ತುಂಬಿದ ಮಿನಿ ಬಾಟ್ಲಿಗಳನ್ನು ಮತ್ತು ತಯಾರು ಮಾಡುವ ಯಂತ್ರಗಳನ್ನು, ಮುಚ್ಚಳಗಳನ್ನೂ, ಖಾಲಿ ಬಾಟ್ಲಿಗಳನ್ನು ಮತ್ತು ಜೀಪನ್ನು ಸಹ ಪೋಲೀಸರು ವಶಪಡಿಸಿಕೊಂಡಿರುತ್ತಾರೆ. ಮಿನಿ ಬಾಟ್ಲಿಂಗ್ ಕಂಪನಿಯಲ್ಲಿ ಸಾರಾಯಿ ತಯಾರು ಮಾಡಲು ಸರಕಾರ ಅನುಮತಿ ಕೊಟ್ಟಿದೆಯೇ? ಅಥವಾ ಇಲ್ಲವೇ? ಹಾಗೂ ಇದರ ಹಿಂದೆ ಯಾರ್ಯಾರಿದ್ದಾರೆ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಈ ಸಭೆಗೆ ವಿವರವಾದ ಹೇಳಿಕೆ ನೀಡಬೇಕೆಂದು ಸರಕಾರದವರನ್ನು ಒತ್ತಾಯಿಸುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ೧೯೮೬ನೇ ಮಾರ್ಚ್ ೧೫ನೇ ದಿನಾಂಕ ದೈನಂದಿನ ಪತ್ರಿಕೆ 'ಕನ್ನಡ ಪ್ರಭಾ'ದ ೪ನೇ ಪುಟದಲ್ಲಿ ಬಾಗೇಪಲ್ಲಿ ತಾಲ್ಲೂಕು ಪರಗೋಡು ಗ್ರಾಮದ ಹತ್ತಿರವಿರುವ ಚಿತ್ರಾವತಿ ನದಿ ದಡದಲ್ಲಿ ಮಿನಿ ಬಾಟಲು ತಯಾರು ಮಾಡುವ ಕಂಪನಿಯ ಮೇಲೆ ಪೋಲೀಸರು ದಾಳಿ ನಡೆಸಿರುವುದರ ಬಗ್ಗೆ ವರದಿಯಾಗಿರುವುದು ಸರಿಯಷ್ಟೇ.

ಈ ಸಂಬಂಧದಲ್ಲಿ ಅಬಕಾರಿ ಉಪ ಆಯುಕ್ತರು (ಜಾರಿ ಮತ್ತು ತನಿಖೆ) ಬೆಂಗಳೂರು ವಿಭಾಗ ಇವರು ಸ್ಥಳಕ್ಕೆ ಭೇಟಿ ಇತ್ತು ತಮ್ಮ ದಿನಾಂಕ ೪-೩-೧೯೮೬ರ ಪತ್ರದ ಸಂಖ್ಯೆ ಡಿ.ಸಿ.ಇ.ಎನ್.ಎಸ್. ಸಿ.ಆರ್.ಎಂ. ೭೩/೮೫-೮೬ರಲ್ಲಿ ಈ ಕೆಳಕಂಡಂತೆ ವರದಿ ಮಾಡಿರುತ್ತಾರೆ.

ಬಾಗೇಪಲ್ಲಿ ತಾಲ್ಲೂಕು ಪರಗೋಡು ಗ್ರಾಮದಲ್ಲಿ ಅಕ್ರಮವಾಗಿ ಕಾನೂನಿಗೆ ವಿರುದ್ಧವಾಗಿ ಸಾರಾಯಿ ಬಾಟಲಿಂಗ್ ಮಾಡುವ ಸ್ಥಳವನ್ನು ದಾಳಿ ಮಾಡಿ, ಮೊಹರು ಮಾಡುವ ಯಂತ್ರಗಳು, ಬಿರುಡೆಗಳು, ಖಾಲಿ ಸೀಸೆಗಳು, ಅಳತೆ ಪ್ರಮಾಣದ ಸಲಕರಣೆಗಳು, ತುಂಬಿದ ಸೀಸೆಗಳು, ಶರಾಬು ಇರುವ ಪ್ಲಾಸ್ಟಿಕ್ ಕ್ಯಾನ್‌ಗಳು ಮತ್ತು ಎಂ.ಜಡ್.ಎ. ೩೨೯೫ ನಂಬರಿನ ಜೀಪು ಇವುಗಳನ್ನು ವಶಪಡಿಸಿಕೊಂಡು ಕ್ರೈಂ ನಂ. ೫೦/೮೬ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ ೧೯೬೫ರ ಸೆಕ್ಷನ್ ೩೪, ೩೫ ಮತ್ತು ೩೬ರ ಪ್ರಕಾರ ಬಾಗೇಪಲ್ಲಿ ಪೋಲೀಸಿನವರು ಮೊಕದ್ದಮೆ ಹೂಡಿರುತ್ತಾರೆ.

ಈ ಸಂಬಂಧದಲ್ಲಿ (೧) ಡಿ. ರಾಮಚಂದ್ರರೆಡ್ಡಿ, ಬಿನ್ ಚಿಕ್ಕತಮ್ಮರೆಡ್ಡಿ, ವಯಸ್ಸು ೪೧, (೨) ವೆಂಕಟರೆಡ್ಡಿ ಬಿನ್ ಚಿಕ್ಕತಿಮ್ಮರೆಡ್ಡಿ ವಯಸ್ಸು ೨೮, (೩) ವೆಂಕಟೇಶ್ ಬಿನ್ ಕೆಂಪಣ್ಣ, ೨೮ ವರ್ಷ, (೪) ನಂಜುಂಡ ಬಿನ್ ಲಕ್ಷ್ಮಣ ವಯಸ್ಸು ೧೫ ಮತ್ತು (೫) ಬಾಷಾ ಬಿನ್ ಫಕ್ರುದ್ದೀನ್, ವಯಸ್ಸು ೧೭ ಇವರುಗಳನ್ನು ದಸ್ತಗಿರಿ ಮಾಡಿರುತ್ತಾರೆ. ಎಲ್ಲಾ ಅಪರಾಧಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಯಾವ ಅಪರಾಧಿಯೂ ಬಾಟಲಿಂಗ್ ಮಾಡುವ ಪರವಾನಗಿಯನ್ನು ಪಡೆದಿರಲಿಲ್ಲ.